## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.314/2026**

**ಪಿರ್ಯಾದಿ** : ರಾಜ್ಯ ಸರ್ಕಾರ,
ಕುಟ್ಟ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : ಶ್ರೀ ನಂದೀಶ್‌ಕುಮಾರ್ ವಿ,
ಗಂಡ: ಈರೋಹೋಬಳಪ್ಪ,
ಪ್ರಾಯ 33 ವರ್ಷ
ವಾಸ: ರಾಜಾನುಕುಂಟೆ, ಬನಶಂಕರಿ ಲೇಔಟ್,
ಬೆಂಗಳೂರು.

**ಆರೋಪಣೆ**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ 12.01.2026 ರಂದು ಸಮಯ ಮಧ್ಯಾಹ್ನ 12.25 ಗಂಟೆಗೆ ಕುಟ್ಟ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಟ್ಟ ಕಾನೂರು ಸಾರ್ವಜನಿಕ ರಸ್ತೆಯ ಪಲ್ಲೇರಿ ಜಂಕ್ಷನ್ ನಲ್ಲಿ ಸಾಕ್ಷಿ 1 ಸತೀಶ್ ರವರು ತಮ್ಮ ಭಾಪ್ತು ಕೆಎ.45.ಇಸಿ.1155ರ ಟಿ.ವಿ.ಎಸ್ ಎಕ್ಸೆಲ್ ಸ್ಕೂಟಿಯಲ್ಲಿ ಕಾನೂರು ಕಡೆಯಿಂದ ಬಂದು ಪಲ್ಲೇರಿ ಜಂಕ್ಷನ್ ಗೆ ತಲುಪುವಾಗ್ಗೆ, ಆರೋಪಿಯಾದ ನೀವು ತಮ್ಮ ಭಾಪ್ತು ಕೆಎ.50.ಬಿ3322 ರ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ಸಾಕ್ಷಿ 1 ರವರಿಗೆ ಡಿಕ್ಕಿ ಪಡಿಸಿ ಆರೋಪಿಯ ಕಾರ್ ನಿಯಂತ್ರಣಕ್ಕೆ ಬಾರದೇ ರಸ್ತೆಯ ಬಲ ಕಚ್ಚಾ ರಸೆತಯ ಬದಿಯಲ್ಲಿದ್ದ ಮರಕ್ಕೆ ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ. ಆ ಕಾರಣ ಬಿ.ಎನ್.ಎಸ್ ಕಲಂ 281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 1 ರವರ ಹಣೆಗೆ, ಮೊಣಕಾಲಿಗೆ, ತೊಡೆಯ ಭಾಗಕ್ಕೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 1 ರವರ ಎಡ ಭುಜಕ್ಕೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆ 1: ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರ : ಅರ್ಥವಾಗಿದೆ

ವಿ. ನಂದೀಶ್ ಕುಮಾರ್

ಪ್ರಶ್ನೆ 2: ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

28-4-26

ಸ್ಥಳ: ಪೊನ್ನಂಪೇಟೆ,
ದಿ:-28-04-2026

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಪೊನ್ನಂಪೇಟೆ.**